# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 266 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀಮತಿ ಹೇಮಲತ ನಾಯಕ್ (ವಿಧಾನಸಭಾ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 29.01.2026 |
| **ಉತ್ತರಿಸುವ ಸಚಿವರು** | : | ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಚಿಕ್ಕ ರಾಂಪುರ ಗ್ರಾಮದಲ್ಲಿರುವ ಶ್ರೀ ಅಂಜನಾದ್ರಿ ದೇವಸ್ಥಾನಕ್ಕೆ ಸಂಬಂಧಿಸಿದ ಯಾತ್ರಿ ನಿವಾಸ (ಡಾರ್ಮೆಂಟರಿ ಕ್ಲಬ್) ಹಾಗೂ ಇತರೆ ಕಾಮಗಾರಿಗಳಿಗೆ ನಿಗಧಿಪಡಿಸಿರುವ ಒಟ್ಟು ಮೊತ್ತ ಎಷ್ಟು; ಹಾಗೂ ಆಡಳಿತಾತ್ಮಕ ಅನುಮೋದನೆ ನೀಡಿದ ದಿನಾಂಕ ಯಾವುದು; | ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಚಿಕ್ಕರಾಂಪುರ ಗ್ರಾಮದಲ್ಲಿರುವ ಶ್ರೀ ಅಂಜನಾದ್ರಿ ದೇವಸ್ಥಾನ ಪ್ರದೇಶ ಅಭಿವೃದ್ಧಿಗೆ ಸಂಬಂಧಿಸಿದಂತೆ ರೂ.21.54 ಕೋಟಿ ಅಂದಾಜು ವೆಚ್ಚದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. |
| ಆ) | ಮೇಲ್ಕಂಡ ಕಾಮಗಾರಿಗಳನ್ನು ಯಾವ ದಿನಾಂಕದೊಳಗೆ ಪೂರ್ಣಗೊಳಿಸಬೇಕಾಗಿತ್ತು; ಮತ್ತು ಸದರಿ ಕಾಮಗಾರಿಗಳು ಪೂರ್ಣಗೊಂಡಿವೆಯೇ; (ಸಂಪೂರ್ಣ ವಿವರಗಳನ್ನು ಒದಗಿಸುವುದು) | ಮೇಲ್ಕಂಡ ಕಾಮಗಾರಿಗಳನ್ನು ದಿನಾಂಕ: 27.03.2024 ರಂದು ಮುಕ್ತಾಯಗೊಳಿಸಬೇಕಾಗಿತ್ತು.<br><br>ಮೇಲ್ಕಂಡ ಕೋಷ್ಟಕದಲ್ಲಿನ ಕ್ರ.ಸಂ.1 ಮತ್ತು 2 ರಲ್ಲಿನ ಕಾಮಗಾರಿಗಳು ಶೇ. 95 ರಷ್ಟು ಪೂರ್ಣಗೊಂಡಿರುತ್ತವೆ. ಉಳಿದಂತೆ ಕ್ರ.ಸಂ.3 ರಲ್ಲಿರುವ ಕಾಮಗಾರಿಯು ಶೇ.20 ರಷ್ಟು ಪೂರ್ಣಗೊಂಡಿರುತ್ತದೆ. |

**(ರೂ. ಲಕ್ಷಗಳಲ್ಲಿ)**

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ |
|---|---|---|
| 1 | ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟದ ಬಳಿ 144 ಕೊಠಡಿಗಳ ಪ್ರವಾಸಿ ಮಂದಿರ ನಿರ್ಮಾಣ ಕಾಮಗಾರಿ. | 998.00 |
| 2 | ಸಾರ್ವಜನಿಕ ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ಸಾರ್ವಜನಿಕ ಶೌಚಾಲಯ ಕಾಮಗಾರಿ | 724.00 |
| 3 | ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟದ ಬಳಿ ಪ್ರದಕ್ಷಣಾ ಪಥ- ಭಾಗ-1 (ನೆಲಹಾಸು ಕಾಮಗಾರಿ ಮಾತ್ರ) ನಿರ್ಮಾಣ ಕಾಮಗಾರಿ. | 432.00 |
| | **ಒಟ್ಟು** | **2154.00** |

| | | |
|---|---|---|
| ಇ) | ಕಾಮಗಾರಿಗಳು ಪೂರ್ಣಗೊಳ್ಳದೆ ಇದ್ದಲ್ಲಿ ವಿಳಂಬಕ್ಕೆ ಕಾರಣ ಯಾರು ಮತ್ತು ಈ ಸಂಬಂಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ; (ವಿವರಗಳನ್ನು ಒದಗಿಸುವುದು) | ಈ ಕೆಳಕಂಡ ಕಾರಣಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಗಳು ಪೂರ್ಣಗೊಳ್ಳುವಲ್ಲಿ ವಿಳಂಬವಾಗಿರುತ್ತದೆ:<br><br>1. ಪ್ರವಾಸಿ ಮಂದಿರ ನಿರ್ಮಾಣ ಕಾಮಗಾರಿ ಮತ್ತು ಸಾರ್ವಜನಿಕ ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ಸಾರ್ವಜನಿಕ ಶೌಚಾಲಯ ಕಾಮಗಾರಿಗಳ ನಿವೇಶನವು ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿದ್ದು, ದಿನಾಂಕ:29.08.2023 ರಂದು ನಿರಾಕ್ಷೇಪಣಾ ಪತ್ರ (NOC) ದೊರೆತಿರುತ್ತದೆ. ಈ ಕಾರಣದಿಂದ ಹಾಗೂ ಸದರಿ ಕಾಮಗಾರಿಗಳ ವಿನ್ಯಾಸವು ಸ್ಥಳೀಯ ಭೌಗೋಳಿಕ ಪ್ರದೇಶಕ್ಕಾನುಗುಣವಾಗಿ ಕಲ್ಲಿನಿಂದ ನಿರ್ಮಿಸಬೇಕಾಗಿರುವುದರಿಂದ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಮುಕ್ತಾಯಗೊಳಿಸಲು ವಿಳಂಬವಾಗಿರುತ್ತದೆ.<br><br>2. ಪ್ರದಕ್ಷಣಾ ಪಥ- ಭಾಗ-1 (ನೆಲಹಾಸು ಕಾಮಗಾರಿ ಮಾತ್ರ) ಕಾಮಗಾರಿಯು ಶೇ.20% ರಷ್ಟು ಮುಕ್ತಾಯಗೊಂಡಿರುತ್ತದೆ. ಉಳಿದ ಶೇ.80 % ರಷ್ಟು ಕಾಮಗಾರಿಯ ಪ್ರದೇಶವು ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿದ್ದು, ಸದರಿ ಇಲಾಖೆಯಿಂದ, ನಿರಾಕ್ಷೇಪಣಾ ಪತ್ರ ದೊರೆಯದ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಮುಕ್ತಾಯಗೊಳಿಸಲು ಸಾಧ್ಯವಾಗಿರುವುದಿಲ್ಲ.<br><br>ಸದರಿ ಕಾಮಗಾರಿಗಳು ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳ ಹಿನ್ನೆಲೆಯಲ್ಲಿ ಪೂರ್ಣಗೊಳ್ಳಲು ವಿಳಂಬವಾಗಿರುತ್ತದೆ. ಹೀಗಾಗಿ ಈ ಕುರಿತು ಯಾವುದೇ ಕ್ರಮ ವಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಈ) | ಆಡಳಿತಾತ್ಮಕ ಅನುಮೋದನೆಯ ನಂತರ ಸದರಿ ಕಾಮಗಾರಿಗಳಿಗೆ ಇದುವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ವಿವರಗಳನ್ನು ಒದಗಿಸುವುದು) | ಮಂಜೂರಾಗಿರುವ ಮೇಲ್ಕಂಡ 3 ಕಾಮಗಾರಿಗಳನ್ನು ಕೈಗೊಳ್ಳಲು ಇಲಾಖೆಯಿಂದ ದಿನಾಂಕ: 07.12.2023ರಂದು ಮೊದಲ ಕಂತಾಗಿ ರೂ.1000.00 ಲಕ್ಷಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪ್ರವಾಸೋದ್ಯಮ ಮೂಲಸೌಕರ್ಯ ನಿಗಮ (ಕೆ.ಟಿ.ಐ.ಎಲ್.), ಬೆಂಗಳೂರು ರವರಿಗೆ ಬಿಡುಗಡೆ ಮಾಡಲಾಗಿರುತ್ತದೆ. |
| ಉ) | ಕಾಮಗಾರಿಗಳು ಇನ್ನೂ ಪೂರ್ಣಗೊಳ್ಳದೆ ಇದ್ದಲ್ಲಿ ಅವುಗಳನ್ನು ಯಾವ ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು? (ವಿವರಗಳನ್ನು ಒದಗಿಸುವುದು) | ಪ್ರವಾಸಿ ಮಂದಿರ ನಿರ್ಮಾಣ ಕಾಮಗಾರಿ ಮತ್ತು ಸಾರ್ವಜನಿಕ ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ಶೌಚಾಲಯ ನಿರ್ಮಾಣ ಕಾಮಗಾರಿಗಳು ಶೇ.95 ರಷ್ಟು ಮುಕ್ತಾಯಗೊಂಡಿದ್ದು, ಬಾಕಿ ಕಾಮಗಾರಿಯನ್ನು ಶೀಘ್ರವಾಗಿ ಮುಕ್ತಾಯಗೊಳಿಸಲು ಕ್ರಮವಹಿಸಲಾಗುವುದು.<br><br>ಪ್ರದಕ್ಷಣಾ ಪಥ - ಭಾಗ-1 (ನೆಲಹಾಸು ಮಾತ್ರ) ಕಾಮಗಾರಿಯನ್ನು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಸ್ವೀಕೃತವಾದ 03 ತಿಂಗಳ ಒಳಗಾಗಿ ಮುಕ್ತಾಯಗೊಳಿಸಲು ಕ್ರಮವಹಿಸಲಾಗುವುದು. |

**TOR 18 TDV 2026**

**(ಎಚ್.ಕೆ. ಪಾಟೀಲ)**
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಡಹಾಗೂ ಪ್ರವಾಸೋದ್ಯಮ ಸಚಿವರು.